## ದಿನಾಂಕ: 19/11/2021 ರ ನೋಡಲ್ ಅಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಂಖ್ಯೆ-140 ಚಾಮರಾಜಪೇಟೆ ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡವಳಿಗಳು

| ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮತ್ತು ಸದಸ್ಯರುಗಳ ವಿವರಗಳು: | | | ಗೈರು ಹಾಜರಿದ್ದ ಇಲಾಖೆ ಸಿಬ್ಬಂಧಿಗಳು |
|---|---|---|---|
| ಕ್ರ.ಸಂ. | ಅಧಿಕಾರಿ/ ನೌಕರರ ಹೆಸರು | ಪದನಾಮ | |
| 1 | ಶ್ರೀಮತಿ. ಶಶಿಕಲಾ. ಎನ್ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ | BWSSB |
| 2 | ಶ್ರೀ. ಎಂ.ಎಸ್. ಉಮೇಶ್ | ಸಂಚಾಲಕರು ಮತ್ತು ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-140 | BESCOM |
| 3 | ಶ್ರೀ. ಸತೀಶ್ ಕುಮಾರ್.ಎ | ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-136 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ) |
| 4 | ಶ್ರೀ. ನರಸಿಂಹ ಮೂರ್ತಿ | ಕಂದಾಯ ವಸೂಲಿಗಾರರು, ವಾರ್ಡ್ ಸಂಖ್ಯೆ-140 | ಪೋಲಿಸ್ ಇಲಾಖೆ, ಸಂಚಾರಿ ಮತ್ತು ಕಾನೂನು ಸುವ್ಯವಸ್ಥೆ |
| 5 | ಶ್ರೀ. ಶ್ರೀನಿವಾಸ್ | ಸ್ಥಳೀಯ ನಾಗರೀಕರು | ಆರೋಗ್ಯ ವೈದ್ಯಾಧಿಕಾರಿಗಳು |
| 6 | ಶ್ರೀ. ಶಿವಕುಮಾರ್ | ಸ್ಥಳೀಯ ನಾಗರೀಕರು | |
| 7 | ಶ್ರೀ. ಅನಿಲ್‌ಕುಮಾರ್ | ಸ್ಥಳೀಯ ನಾಗರೀಕರು | |
| 8 | ಶ್ರೀ. ಮಂಜುನಾಥ | ಸ್ಥಳೀಯ ನಾಗರೀಕರು | |

ವಾರ್ಡ್ ಸಮಿತಿಯ ಉದ್ದೇಶ ಮತ್ತು ಸಭೆಯ ಮಹತ್ವವನ್ನು ತಿಳಿಸಿ ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು, ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಹಿಂದಿನ ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಓದಿ ರೆಕಾರ್ಡ್ ಮಾಡಲಾಯಿತು. ದಾಖಲಿಸಲಾದ ವಿಷಯಗಳಲ್ಲಿ ಬಾಕಿ ಉಳಿದಿರುವ ಕೆಲಸ ಕಾರ್ಯಗಳನ್ನು ಜರೂರಾಗಿ ಕ್ರಮವಹಿಸುವಂತೆ ಸಂಬಂಧಿಸಿದವರಿಗೆ ಸೂಚಿಸಲಾಯಿತು.
2. ಇಂದಿನ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಚರ್ಚಿಸಿದ ವಿಷಯಗಳು:

| ಕ್ರ.ಸಂ | ವಿಷಯಗಳು | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 1 | ವಾರ್ಡ್ ವ್ಯಾಪ್ತಿಯಲ್ಲಿ ಬೆಸ್ಕಾಂ ವತಿಯಿಂದ ವಿದ್ಯುತ್ (Load Sheding)ಕಡಿತವಾಗುತ್ತಿರುವ ಬಗ್ಗೆ | ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ವಾರ್ಡ್ ವ್ಯಾಪ್ತಿಯಲ್ಲಿ ನಿಯಮಿತವಿಲ್ಲದ Load Sheding ವಿದ್ಯುತ್ ಕಡಿತ ಉಂಟಾಗುತ್ತಿದ್ದು, ಇದರಿಂದಾಗಿ ಮಕ್ಕಳ ಓದು ಬರಹಕ್ಕೆ ಹಾಗೂ ಸಾರ್ವಜನಿಕರ ದೈನಂದಿನ ಕೆಲಸ ಕಾರ್ಯಗಳಿಗೆ ತೊಂದರೆಯಾಗಿತ್ತಿರುವುದರಿಂದ ನಿಯಮಿತ Load Sheding ಕೈಗೊಳ್ಳಲು ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಲು ತಿಳಿಸಿದರು. | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರರು, ಬೆಸ್ಕಾಂ ವಿಭಾಗ |
| 2 | R.O. ಘಟಕದ ಮೇಲೆ ಸ್ಥಳೀಯ ಶಾಸಕರು ಮತ್ತು ಪಾಲಿಕೆ ಸದಸ್ಯರ ಜಾಹಿರಾತು ಫಲಕವನ್ನು ತೆರವುಗೊಳಿಸುವ ಬಗ್ಗೆ | ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಮಾನ್ಯ ಆಯುಕ್ತರ ಆದೇಶದನ್ವಯ ಜಾಹಿರಾತು ಫಲಕವನ್ನು ತೆರವುಗೊಳಿಸಲು ಸಭೆಯಲ್ಲಿ ಸೂಚಿಸಲಾಯಿತು. | ಸಹಾಯಕ ಕಂದಾಯ ಅಧಿಕಾರಿ, ಚಾಮರಾಜಪೇಟೆ ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಚಾಮರಾಜಪೇಟೆ ಉಪವಿಭಾಗ, ಸಹಾಯಕ ಅಭಿಯಂತರರು ವಾರ್ಡ್-140 |

ಪ್ರ.ತಿ.ನೋ

Scanned by CamScanner

| | | | |
|---|---|---|---|
| 3 | ವಾರ್ಡಿನ ಮುಖ್ಯ ರಸ್ತೆಯಲ್ಲಿರುವ ರಸ್ತೆ ಗುಂಡಿಗಳನ್ನು ಮುಚ್ಚಲು ಬಗ್ಗೆ | ವಾರ್ಡಿನ ಮುಖ್ಯರಸ್ತೆಯಲ್ಲಿ ಮಳೆಗಾಲದಿಂದ ಹೊಸದಾಗಿ ಗುರುತಿಸಿರುವ ರಸ್ತೆ ಗುಂಡಿಗಳನ್ನು ಜಲಮಂಡಳಿ ಅಗೆತಗಳು ಹಾಗೂ ಇನ್ನಿತರ ಅಗೆತಗಳಿಗೆ ಸಂಬಂಧಪಟ್ಟಿರುವುದರಿಂದ ರಸ್ತೆ ಗುಂಡಿಗಳನ್ನು ಮುಚ್ಚಲು ಅಗತ್ಯ ಕ್ರಮಕೈಗೊಳ್ಳುವ ಬಗ್ಗೆ ಅಧ್ಯಕ್ಷರು ರವರು ತುರ್ತಾಗಿ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು. | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಚಾಮರಾಜಪೇಟೆ ಉಪವಿಭಾಗ, ಸಹಾಯಕ ಅಭಿಯಂತರರು ವಾರ್ಡ್-140 |
| 4 | ವೈದ್ಯರ ತಂಡ ಮನೆಗಳ ಕಡೆ ಕಾರ್ಯ ಆರಂಭಿಸುವ ಬಗ್ಗೆ | ಸಭೆಯಲ್ಲಿ ಹಾಜರಿದ್ದ ವೈದ್ಯರು ಹೊಸದಾಗಿ ವೈದ್ಯರ ತಂಡ ಮನೆಗಳ ಕಡೆ ಎಂಬ ಕಾರ್ಯವನ್ನು ವಾರ್ಡ್ ವ್ಯಾಪ್ತಿಯಲ್ಲಿ ಪ್ರಾರಂಭಿಸಿದ್ದು, ಇದರಿಂದ ಮನೆಗಳಲ್ಲಿ ಉತ್ಪತ್ತಿಯಾಗುವ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಕಾರ್ಯಾಚರಣೆ, ಕೋವಿಡ್ ಲಸಿಕೆಯನ್ನು ಪಡೆಯದೆ ಇರುವವರನ್ನು ಗುರುತಿಸುವ ಸಲುವಾಗಿ ಈ ಕಾರ್ಯವನ್ನು ಹೊಸದಾಗಿ ಪ್ರಾರಂಭಿಸಲಾಗಿದೆ ಎಂದು ಸಭೆಯಲ್ಲಿ ಹಾಜರಿದ್ದ ವೈದ್ಯರು ತಿಳಿಸಿದರು. | ಆರೋಗ್ಯ ವೈದ್ಯಾಧಿಕಾರಿ, ಚಾಮರಾಜಪೇಟೆ |
| 5 | ಬೀದಿಬದಿ ವ್ಯಾಪಾರಿಗಳಿಂದ ಮುಖ್ಯರಸ್ತೆಯಲ್ಲಿ ವಾಹನ ದಟ್ಟಣೆ ಹಾಗೂ ರಸ್ತೆ ಅಪಘಾತ ಸಂಬಂಧಿಸುತ್ತಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. | ಈ ಬಗ್ಗೆ ಚಾಮರಾಜಪೇಟೆ ಬೀದಿಬದಿ ವ್ಯಾಪಾರಿಗಳನ್ನು ತೆರವುಗೊಳಿಸಲು ಪೋಲಿಸ್ ಇಲಾಖೆಯ ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಂಚಾರಿ ವಿಭಾಗದವರಿಗೆ ಪತ್ರ ಮುಖೇನ ತಿಳಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಸಹಾಯಕ ಅಭಿಯಂತರರು ವಾರ್ಡ್:140 |

ಮೇಲ್ಕಂಡ ಎಲ್ಲಾ ವಿಷಯಗಳೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ವಂದನಾರ್ಪಣೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು
ಸಹಾಯಕ ಅಭಿಯಂತರರು

ಅಧ್ಯಕ್ಷರು &
ನೋಡಲ್ ಅಧಿಕಾರಿ

<u>ಪ್ರತಿಯನ್ನು:-</u>

1. ಮಾನ್ಯ ಆಡಳಿತಾಧಿಕಾರಿ, ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಪಶ್ಚಿಮ) ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಮುಖ್ಯ ಅಭಿಯಂತರರು (ಪಶ್ಚಿಮ) ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
5. ನೋಡಲ್ ಅಧಿಕಾರಿ, ವಾರ್ಡ್ ಸಂಖ್ಯೆ: 140 ಚಾಮರಾಜಪೇಟೆ ರವರ ಅವಗಾಹನೆಗೆ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಪಶ್ಚಿಮ ವಿಭಾಗ, ಬಿಬಿಎಂಪಿ ರವರ ಅವಗಾಹನೆಗೆ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

Scanned by CamScanner

8. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು & ಸಹಾಯಕ ಅಭಿಯಂತರರು (BWSSB) ಚಾಮರಾಜಪೇಟೆ ವಲಯ ರವರ ಅವಗಾಹನೆಗೆ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
9. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು & ಸಹಾಯಕ ಅಭಿಯಂತರರು (BESCOM) ಚಾಮರಾಜಪೇಟೆ ವಲಯ ರವರ ಅವಗಾಹನೆಗೆ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿ.
10. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬೃಹತ್ ರಾಜಕಾಲುವೆ (SWD) ಪಶ್ಚಿಮ ವಲಯ ರವರ ಅವಗಾಹನೆಗೆ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
11. ಆರೋಗ್ಯ ವೈದ್ಯಾಧಿಕಾರಿ, ಚಾಮರಾಜಪೇಟೆ ವಲಯ ರವರ ಅವಗಾಹನೆಗೆ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
12. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ಚಾಮರಾಜಪೇಟೆ ವಿಭಾಗ ರವರ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹ ಕಂದಾಯ ಅಧಿಕಾರಿ, ಚಾಮರಾಜಪೇಟೆ ಉಪವಿಭಾಗ ರವರ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
14. ಪೊಲೀಸ್ ಇನ್ಸ್‌ಪೆಕ್ಟರ್, ಕಾನೂನು ಮತ್ತು ಸುವ್ಯವಸ್ಥೆ, ಚಾಮರಾಜಪೇಟೆ/ವಿ.ವಿ.ಪುರಂ/ಸೆಂಟ್ರಲ್ ಪೊಲೀಸ್ ಠಾಣೆ, ಬೆಂಗಳೂರು ರವರ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
15. ಆರಕ್ಷಕ ನಿರೀಕ್ಷಕರು, ಜೆ.ಜೆ.ಆರ್. ನಗರ/ ಚಾಮರಾಜಪೇಟೆ ಸಂಚಾರಿ ವಿಭಾಗ, ಬೆಂಗಳೂರು ರವರ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
16. ವಾರ್ಡ್ ಸಂಖ್ಯೆ: 140 ಚಾಮರಾಜಪೇಟೆ ವಾರ್ಡ್ ಕಮಿಟಿ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.

Scanned by CamScanner